


# ಮಹಾ ಕುಳ್ಳಿ!



ಚಿಕ್ಕ ಮಕ್ಕಳ ಕುರ್ಚಿಯಲ್ಲಿ ಕುಳಿತು ಲ್ಯಾಪ್‌ಟಾಪ್‌ನಲ್ಲಿ ಕೆಲಸ ಮಾಡುತ್ತಿರುವ ಈಕೆಯ ಕಾಲು ಕೂಡಾ ನೆಲಕ್ಕೆ ತಾಕುವುದಿಲ್ಲ. 22ರ ಹರೆಯದ ಈ ಕುಳ್ಳಿಯ ಹೆಸರು ಬ್ರಿಜೆಟ್ ಜೋರ್ಡಾನ್. ಇಲಿನಾಯ್ಸ್‌ನ ಸ್ಯಾಂಡೋವಲ್ ಬಳಿ ಹೆತ್ತವರೊಂದಿಗೆ ವಾಸಿಸುತ್ತಿರುವ ಈಕೆಗೆ ಪ್ರಪಂಚದಲ್ಲೇ ಅತೀ ಕುಳ್ಳಿ ಎಂಬ ಗಿನ್ನಿಸ್ ದಾಖಲೆಯ ಕಿರೀಟ ಇತ್ತೀಚೆಗೆ ಲಭಿಸಿದೆ.

ಈಕೆಯ ಎತ್ತರ ಕೇವಲ 2 ಅಡಿ 3 ಇಂಚುಗಳು! ಇವಳ ಒಡಹುಟ್ಟಿದ 20ರ ಹರೆಯದ ಬ್ರಾಡ್‌ನ ಎತ್ತರ 3 ಅಡಿ 2 ಇಂಚುಗಳು. ಇವರಿಬ್ಬರೂ ಪ್ರಪಂಚದಲ್ಲೇ ಅತೀ ಕುಳ್ಳಗಿನ ಒಡಹುಟ್ಟಿದವರು. ಬ್ರಿಜೆಟ್ ಜೋರ್ಡಾನ್ ಹುಟ್ಟಿದಾಗಿನ ತೂಕ ಸುಮಾರು 750 ಗ್ರಾಂ ಹಾಗೂ ಎತ್ತರ 12.5 ಇಂಚು! ಬ್ರಾಡ್‌ನ ಹುಟ್ಟಿದಾಗಿನ ತೂಕ 1 ಕಿ.ಗ್ರಾಂ ಮತ್ತು ಎತ್ತರ 13.5 ಇಂಚುಗಳಷ್ಟು ಮಾತ್ರ ಇತ್ತಂತೆ. ಇಬ್ಬರೂ ಕಾಸ್ಕಾಸಿಯಾ ಕಾಲೇಜ್‌ನಲ್ಲಿ ಓದುತ್ತಿದ್ದಾರೆ. ಚಿಯರ್ ಲೀಡಿಂಗ್ ಹಾಗೂ ಡ್ಯಾನ್ಸ್ ಜೋರ್ಡಾನ್‌ಳ ಹವ್ಯಾಸವಾಗಿದ್ದರೆ ಜಿಮ್ನಾಸ್ಟಿಕ್, ಬ್ಯಾಸ್ಕೆಟ್‌ಬಾಲ್, ಮ್ಯಾಜಿಕ್ ಟ್ರಿಕ್ಸ್ ಮಾಡುವುದು ಬ್ರಾಡ್‌ಗೆ ಬಹಳ ಇಷ್ಟ.

ಟರ್ಕಿಯಲ್ಲಿರುವ 2 ಅಡಿ 4.5 ಇಂಚು ಎತ್ತರದ ಕುಳ್ಳ ಕೊಕಾಮ್ಯಾನ್‌ನ ರೆಕಾರ್ಡ್ ಮುರಿದು ಇದೀಗ ಹೊಸ ದಾಖಲೆ ಸ್ಥಾಪಿಸಿರುವ ಜೋರ್ಡಾನ್‌ಳಿಗೆ ಈ ದಾಖಲೆ ಬಲು ಸಂತಸ ತಂದಿದೆಯಂತೆ. 'ನಾವು ಹೇಗೇ ಇರಲಿ, ನಮ್ಮ ಬಗ್ಗೆ ನಾವು ತುಂಬು ವಿಶ್ವಾಸದಿಂದ ಇರಬೇಕು' ಎನ್ನುವುದು ಜೋರ್ಡಾನ್‌ಳ ಸ್ಪಷ್ಟನುಡಿ.

■ ವಿದ್ಯಾ ವಿ. ಹಾಲಭಾವಿ

